

ಡಾ.ವಿನೋದ ಛೆಬ್ಬಿ

**ಹೊಸ ಮಾನವರ ಸಂಪರ್ಕವು ನಮ್ಮಲ್ಲಿ ಇಷ್ಟರ ತನಕ ಗುಪ್ತವಾಗಿರುವ ಸ್ನೇಹಬಾಂಧವ್ಯದ ಸೆಲೆಯನ್ನು ಹೊರಗೆ ಹರಿಸುತ್ತದೆ.**

# 338: ಹೊಸ ದಾರಿ - 78

ಒಂಟಿ ಹಿರಿಯರಿಗೆ ಮದುವೆಯ ಮುದ್ರೆ, ಕಾಯಂ ಬದ್ಧತೆ, ಭದ್ರತೆ, ಮಕ್ಕಳು – ಇಂಥ ವ್ಯಾವಹಾರಿಕ ಬಂಧನಗಳಿಲ್ಲದ ವಿಶೇಷ ಸಾಂಗತ್ಯವೊಂದು ಇಳಿವಯಸ್ಸಿನಲ್ಲಿ ಬೇಕಾಗುತ್ತದೆಂದು ಹೋದಸಲ ವಿವರಿಸಿದ್ದೆ. ಇಳಿವಯಸ್ಸಿನವರು ಒಂಟಿಯಾಗಿದ್ದರೆ ಇದೆಲ್ಲ ಸರಿ; ಆದರೆ ಸಂಗಾತಿ ಇದ್ದರೂ ಸಂಬಂಧವಿಲ್ಲದಂತೆ ಇದ್ದರೆ? ಅದಕ್ಕೇನಾದರೂ ಉಪಾಯಗಳಿವೆಯೆ? ಇದನ್ನು ಒಂದು ದೃಷ್ಟಾಂತದಿಂದ ಶುರುಮಾಡೋಣ:

ಅರವತ್ತು ವರ್ಷಗಳ ಹಿಂದಿನ ಮಾತು. ಆಗಿನ್ನೂ ಕುಷ್ಠರೋಗಕ್ಕೆ ಔಷಧಿ ವ್ಯಾಪಕವಾಗಿರಲಿಲ್ಲ; ಹಾಗಾಗಿ ಕುಷ್ಠರೋಗಿಗಳು ಅಂಗವಿಕಲರಾಗುವುದು ಸಾಮಾನ್ಯವಾಗಿತ್ತು. ಆಗ ಬೀದಿಯಲ್ಲಿ ಒಂದು ದೃಶ್ಯವನ್ನು ನೋಡಿದೆ. ಕುಷ್ಠಪೀಡಿತ ಭಿಕ್ಷುಕನೊಬ್ಬ ಮಣೆಗಾಡಿಯ ಮೇಲೆ ಕುಳಿತುಕೊಂಡಿದ್ದ. ಒಬ್ಬಳು – ಬಹುಶಃ ಆತನ ಹೆಂಡತಿ ಇರಬಹುದು– ಮಣೆಗಾಡಿಯ ಹಗ್ಗವನ್ನು ಹೆಗಲಮೇಲೆ ಹೊತ್ತುಕೊಂಡು ಮುಂದೆಳೆಯುತ್ತ ಸಾಗುತ್ತಿದ್ದಳು. ಅವನ ಮೊಳಕಾಲುಗಳ ಕೆಳಗಿನ ಭಾಗಗಳು ಕಾಣುತ್ತಿರಲಿಲ್ಲ. ಆತ ಬೆರಳುಗಳಿಲ್ಲದ ಮೊಂಡು ಹಸ್ತವನ್ನು ಮುಂದೆ ಚಾಚಿ ಕೇಳಿಕೊಳ್ಳುತ್ತಿದ್ದ. 'ನನ್ನಿಂದ ತೆಪ್ಪಾಯ್ತು, ಇದೊಂದು ಸಾರೆ ಕ್ಷಮಿಸು!' ಆಕೆ ಅವನತ್ತ ನೋಡದೇ ಉತ್ತರಿಸುತ್ತಿದ್ದಳು. 'ಆಗೂದಿಲ್ಲೋ. ನನ್ನ ಮನಸ್ಸು ಕಲ್ಲಾಗೇದೋ ಗೆಣೆಯಾ.' ಎಂದು ಹೇಳುತ್ತಲೇ ಗಾಡಿ ಎಳೆಯುತ್ತಿದ್ದಳು. ಅವಳೆಂದ ಪ್ರತಿ ಪದ ಈಗಲೂ ನೆನಪಿದೆ. ಅವಳ ಭಾಷಾ ಸಂಪತ್ತು ಒತ್ತಟ್ಟಿಗಿರಲಿ, ಅವಳನ್ನು ಅರ್ಥೈಸಿಕೊಳ್ಳಬೇಕಾದರೆ ದಶಕಗಳೇ ಹಿಡಿಯಿತು. ಅವಳು ಕೊಡುತ್ತಿದ್ದ ಸಂದೇಶವೇನು?: 'ಭಂಡ ಗಂಡನೇ, ನಿನ್ನೊಂದಿಗೆ ಸಂಬಂಧ ಸಾಕಾಗಿ ಹೋಗಿದೆ. ಆದರೆ ನಿನ್ನ ಕೈಬಿಡಲಾರೆ. ಹಾಗೆಂದು ನನ್ನನ್ನು ಆತ್ಮೀಯಳೆಂದು ತಪ್ಪು ತಿಳಿಯಬೇಡ.'

ಈ ಘಟನೆಯ ಹಿನ್ನೆಲೆ ಏನಿರಬಹುದು? ಗಂಡ ಕುಷ್ಠರೋಗದ ಕಾರಣದಿಂದ ಸಮಾಜದಿಂದ ದೂರೀಕರಿಸಲ್ಪಟ್ಟಿದ್ದಾನೆ. ಅಂಗವೈಕಲ್ಯದ ಕಾರಣದಿಂದ ಹೆಂಡತಿಯನ್ನು ಪೂರ್ತಿಯಾಗಿ ಅವಲಂಬಿಸಿದ್ದಾನೆ. ನಡೆಯಲೂ ಆಗದವನು ಏನು ತಪ್ಪು ಮಾಡಿರಬಹುದು? ನನಗೆ ಅನಿಸುವ ಮಟ್ಟಿಗೆ ಈಕೆಯ ಮೇಲಿನ ತನ್ನ ಅವಲಂಬನೆಯನ್ನು ಹಕ್ಕೆಂದು ಸಾಧಿಸುತ್ತ, ತನ್ನಿಷ್ಟದಂತೆ ನಡೆದುಕೊಳ್ಳಲು ಆಕೆಯನ್ನು ಹಿಂಸಿಸುತ್ತಿದ್ದಾನೆ. ಆಕೆ ಸಾಕಾಗಿ ಸಂಬಂಧ ಕಡಿದುಕೊಂಡು ದೂರವಾಗುತ್ತಿರುವಾಗ ಒಂಟಿತನ ಅನುಭವಿಸುತ್ತ, ಸಂಬಂಧಕ್ಕೆ ತೇಪೆಹಾಕಲು ಹೆಣಗುತ್ತಿದ್ದಾನೆ (ಇದಕ್ಕೆ ಆಡುಮಾತಿನಲ್ಲಿ ತಿಪ್ಪೆ ಸಾರಿಸುವುದು ಎನ್ನುತ್ತಾರೆ).

ಇಂಥದ್ದು ನಮ್ಮ ಹಿರಿಯರ ದಾಂಪತ್ಯಗಳಲ್ಲಿ ಸಾಕಷ್ಟು ನಡೆಯುತ್ತಿದೆ. ಇಳಿವಯಸ್ಸಾದರೂ ಸಂಗಾತಿಯ ಜೊತೆಗೆ ಹೊಂದಿಕೊಳ್ಳದಿರುವ ದಾಂಪತ್ಯಗಳು ನಮ್ಮಲ್ಲಿ ಸಮೃದ್ಧವಾಗಿವೆ. ಸಂಗಾತಿಯನ್ನು ತನ್ನ ಮುಷ್ಟಿಯಲ್ಲಿ ಇಟ್ಟುಕೊಳ್ಳುವುದೇ ದಾಂಪತ್ಯದ ಮುಖ್ಯ ಉದ್ದೇಶವೆನಿಸುತ್ತಿದೆ. ಪರಿಣಾಮವಾಗಿ ಅತೃಪ್ತಿ ಹೊಗೆಯಾಡಿ ಇತರರನ್ನು ಉಸಿರುಗಟ್ಟಿಸುವುದರಲ್ಲಿ ಅಚ್ಚರಿಯಿಲ್ಲ. ಹಳೆಯ ಬಿದಿರಿನಂತೆ ಹೆಚ್ಚು ಬಾಗಿಸಲು ಹೋದರೆ ಮುರಿಯುವಂತೆ ವರ್ತಿಸುವ ಇಂಥವರಿಗೆ ಭಾವನಾತ್ಮಕವಾಗಿ ಸಂವೇದನಾಶೀಲರಾಗುವಂತೆ ಏನು ಮಾಡಲು ಸಾಧ್ಯವಿದೆ ಎಂದು ಯೋಚಿಸುವಾಗ ಒಂದು ಘಟನೆ ನೆನಪಾಗುತ್ತಿದೆ: ನಮ್ಮಜ್ಜಿ ಗೋಳು ಹೊಯ್ದುಕೊಳ್ಳುವುದರಲ್ಲಿ ಕುಪ್ರಸಿದ್ಧಳು. ಒಮ್ಮೆ ನಮ್ಮ ಮನೆಯಲ್ಲಿ ಕನ್ಯಾ ಪರೀಕ್ಷೆಗೆ ಗಂಡಿನ ಕಡೆಯವರು ಬರುವರೆಂದು ಗೊತ್ತಾಯಿತು. ಅಜ್ಜಿ ಎಲ್ಲರಿಗಿಂತ ಮೊದಲು ಸಿಂಗಾರಗೊಂಡು ತಯಾರಾದಳು. ಜನರೆಲ್ಲ ಬಂದುಹೋಗುವ ತನಕ ಸೊಸೆಯೊಡನೆಯ ಉಪಚಾರದ ನಡತೆ ನಂಬಲಸಾಧ್ಯವಾಗಿತ್ತು! ಈ ನಡತೆ – ತೋರಿಕೆಯದ್ದಾದರೂ ಸರಿ – ಹೇಗೆ ಸಾಧ್ಯವಾಯಿತು? ಹೊಸಬರು ನಮ್ಮ ಬದುಕಿನಲ್ಲಿ ಬರುತ್ತಾರೆ ಎನ್ನುವಾಗ ಬದಲಾವಣೆ ಮಾಡಿಕೊಳ್ಳಲು ತಯಾರಾಗುತ್ತೇವೆ. ಯಾಕೆ? ಹೊಸ ಮಾನವರ ಸಂಪರ್ಕವು ನಮ್ಮಲ್ಲಿ ಇಷ್ಟರತನಕ ಗುಪ್ತವಾಗಿರುವ ಸ್ನೇಹ–ಬಾಂಧವ್ಯದ ಸೆಲೆಯನ್ನು ಹೊರಗೆ ಹರಿಸುತ್ತದೆ. ಅಂಥದ್ದರಲ್ಲಿ ಯಾರಾದರೂ ತಮ್ಮಲ್ಲಿ ವೈಯಕ್ತಿಕವಾಗಿ ಆಸಕ್ತಿ ತೋರಿಸುವರೆಂದು ಗೊತ್ತಾದರೆ?

ನೀವು ಹಿರಿಯರಾಗಿದ್ದು, ಸಿಡಿಮಿಡಿಗೊಳ್ಳುವ ಸಂಗಾತಿ ನಿಮಗಿದ್ದಾರೆ ಎಂದುಕೊಳ್ಳಿ. ಏನು ಮಾಡುತ್ತೀರಿ? ಜಗಳ ತಪ್ಪಿಸಲು ಮನೆಯೊಳಗೆ ಅವರಿಂದ ಆದಷ್ಟು ದೂರವಿರುತ್ತೀರಿ. ಒಂಟಿತನದ ನಿವಾರಣೆಗಾಗಿ ಮನೆಯ ಹೊರಗೇ ಸ್ನೇಹಿತರೊಂದಿಗೆ ಕಾಲಕಳೆಯಲು ಇಷ್ಟಪಡುತ್ತೀರಿ. ಬದಲಾಗಿ, ಒಂದು ಹೊಸ ಪ್ರಯೋಗ ಮಾಡಿನೋಡಿ. ಸಂಗಾತಿಯನ್ನು ನಿಮ್ಮೊಂದಿಗೆ ಕರೆದೊಯ್ದು ನಿಮ್ಮ ಗೆಳೆಯ/ ಗೆಳತಿಗೆ ಪರಿಚಯಿಸಿ. ಅವರಿಬ್ಬರ ನಡುವೆ ಸ್ನೇಹ ಬೆಳೆಯಲು ಅವಕಾಶ ಕೊಡಿ. ಪರಿಚಯ ಸ್ವಲ್ಪ ಗಾಢವಾದಮೇಲೆ ಅವರಿಬ್ಬರ ನಡುವೆ ಪ್ರತ್ಯೇಕ ಸಂಬಂಧ ಬೆಳೆದರೆ ಆಕ್ಷೇಪಿಸಬೇಡಿ.

ಹೀಗೆ ಯಾಕೆ ಹೇಳುತ್ತಿದ್ದೇನೆ? ಪ್ರತಿಯೊಬ್ಬರಿಗೂ ಸಾಂಗತ್ಯದ ಬಗೆಗೆ ಅವರದೇ ಆದ ಕಲ್ಪನೆಗಳಿದ್ದು ಅವೆಲ್ಲವನ್ನೂ ದಾಂಪತ್ಯದ ಚೌಕಟ್ಟಿನೊಳಗೆ ಪೂರೈಸಿಕೊಳ್ಳಲು ಆಗುವುದಿಲ್ಲ. ಯಾಕೆಂದರೆ ದಾಂಪತ್ಯಕ್ಕೆ ಅದರದೇ ಆದ ಇತಿಮಿತಿಗಳಿವೆ. ಉದಾಹರಣೆಗೆ, ಮದುವೆಯ ನಂತರ ವೈಯಕ್ತಿಕ ಸ್ವಾತಂತ್ರ್ಯ ಮೊಟಕಾಗುತ್ತದೆ. ಸ್ವೇಚ್ಛೆಗೆ ಕಡಿವಾಣ ಬೀಳುತ್ತದೆ. ಮುಖ್ಯವಾಗಿ ಹೊಸತನ ಬಹಳ ಬೇಗ ಹಳತಾಗುತ್ತದೆ. ಪರಿಣಾಮವಾಗಿ ಹತಾಶೆ, ನಿರಾಸೆ ಬೆಳೆಯುತ್ತದೆ. ಆಗ ಹೊಸಬರ ಸಹವಾಸ ಸಿಕ್ಕರೆ ತನ್ನಿಷ್ಟಗಳನ್ನು ಪೂರೈಸಿಕೊಳ್ಳಬಹುದೇನೋ ಎಂಬ ಆಸೆ ಮೊಳೆಯುತ್ತದೆ (ಪರಸಂಬಂಧಗಳಿಗೆ ಇದೂ ಒಂದು ಕಾರಣ). ಇಂಥದ್ದೇ ಕಲ್ಪನೆ ನಿಮ್ಮಲ್ಲಿರುವಂತೆ ನಿಮ್ಮ ಸಂಗಾತಿಯಲ್ಲೂ ಇದೆ ಎನ್ನುವುದು ಅಪ್ರಿಯವಾದರೂ ಸತ್ಯವಾಗಿದೆ.

ಸಂಗಾತಿಗೆ ನಿಮ್ಮ ಗೆಳೆಯ/ಗೆಳತಿಯನ್ನು ಪರಿಚಯಿಸುವುದರಲ್ಲಿ ಅಳುಕಿದೆ – ಅವರಿಬ್ಬರಲ್ಲಿ ಅನೈತಿಕ ಸಂಬಂಧ ಬೆಳೆದರೆ? ಈ ಸಾಧ್ಯತೆಯನ್ನು ನಾನೂ ಒಪ್ಪುತ್ತೇನೆ. ಆದರೆ ನೀವು ಸ್ವತಃ ನಡುವೆ ಇರುವುದರಿಂದ ಇದರ ಮೇಲ್ವಿಚಾರಣೆ ನಿಮ್ಮ ಕೈಯಲ್ಲಿರುತ್ತದೆ. ಒಂದುವೇಳೆ ಪರಿಸ್ಥಿತಿ ಕೈಮೀರಿದರೆ? ಹೀಗೆಯೇ ಒಬ್ಬಾಕೆಯಲ್ಲಿ ನಡೆಯಿತು. ಇಳಿವಯಸ್ಸಿನ ಈಕೆ ಗಂಡನ ನಿರ್ಲಕ್ಷ್ಯ ಸ್ವಭಾವಕ್ಕೆ ಬೇಸತ್ತಿದ್ದಳು. ಅಕಸ್ಮಾತ್ತಾಗಿ ಬಂದ ಗೆಳತಿಯನ್ನು ಗಂಡನಿಗೆ ಪರಿಚಯಿಸಿದಳು. ಗಂಡನಿಗೂ ಗೆಳತಿಗೂ ಸಾಮಾನ್ಯ ಹವ್ಯಾಸಗಳಿದ್ದುದರಿಂದ ಅವರಲ್ಲಿ ವಿಶೇಷ ಸಂಬಂಧ ಬೆಳೆಯಿತು. ಅವರು ತೀರಾ ಹತ್ತಿರವಾಗುವುದೂ, ಇವಳ ಕಣ್ಣುತಪ್ಪಿಸಿ ಭೇಟಿಯಾಗುವುದು ನಡೆಯಿತು. ಆಗಾಕೆ ಏನು ಮಾಡಿದಳು? ಗಂಡನನ್ನು ಪ್ರಶ್ನಿಸುವುದಾಗಲೀ, ನಿಯಂತ್ರಿಸುವುದಾಗಲೀ ಮಾಡಲಿಲ್ಲ. ಯಾಕೆ? ಅವನ ವರ್ತನೆಯಲ್ಲಿ ಬದಲಾವಣೆ ಆಗಿದ್ದು ಇವಳಿಗೆ ಅನುಕೂಲವಾಗಿತ್ತು. ಈಕೆ ಹೇಳಿದ್ದಕ್ಕೆ ಅವನು ಎದುರಾಡದೆ ಒಪ್ಪಿಕೊಳ್ಳುತ್ತಿದ್ದ. ಈಕೆಯ ದೋಷಗಳನ್ನು ಎತ್ತಿತೋರಿಸುವುದನ್ನು ಕಡಿಮೆಮಾಡಿದ್ದ. ಎಲ್ಲಿ ತನ್ನ ಸಂಬಂಧ ಹೊರಗೆ ಬರುತ್ತದೋ ಎಂಬ ಅಳುಕಿನಿಂದ ಹೆಂಡತಿಗೆ ವಿಶೇಷ ಗಮನಕೊಡಲು ಶುರುಮಾಡಿದ. ಹಿನ್ನೆಲೆ ಗೊತ್ತಿದ್ದ ಈಕೆ ಬುದ್ಧಿವಂತಿಕೆಯಿಂದ ನಿಭಾಯಿಸಿದಳು. ಇಳಿವಯಸ್ಸಿನ ಕಾರಣದಿಂದ ಅವರಿಬ್ಬರ ನಡುವೆ ಅನೈತಿಕ ಅಥವಾ ಕಾಯಂ ಸಂಬಂಧ ಆಗಲಾರದು ಎಂದು ಆಕೆಗೆ ಗೊತ್ತಿತ್ತು. ಕ್ರಮೇಣ ಹೊಸತನ ಕಳೆದುಕೊಂಡ ಗಂಡ ಕೌಟುಂಬಿಕ ಸಂಬಂಧಕ್ಕೆ ಮರಳಿದ. ಆಗ ಆಕೆ ಗಂಡನೊಡನೆ ಕೂತುಕೊಂಡು ಮಾತಾಡುತ್ತ ಗೆಳತಿಯೊಡನೆಯ ಆತನ ಸಂಬಂಧದ ಮೂಲಕ ಅವನಲ್ಲಿ ಆದ ಬದಲಾವಣೆಯನ್ನು ತೋರಿಸಿ ಮೆಚ್ಚಿಕೊಂಡಳು. ಇದು ಅವರ ಇಳಿವಯಸ್ಸಿನಲ್ಲಿ ಸಂಬಂಧದ ಪುನರುಜ್ಜೀವನಕ್ಕೆ ಕಾರಣವಾಯಿತು.

ಅಂದಹಾಗೆ ನಾನಾಕೆಗೆ, 'ಅವರ ಸಂಬಂಧದಿಂದ ನಿಮ್ಮ ದಾಂಪತ್ಯ ಬಿರುಕು ಬಿಡುವ ಭಯವಾಗಲಿಲ್ಲವೆ?' ಎಂದು ಕೇಳಿದಾಗ ಆಕೆ ಮಾರ್ಮಿಕವಾಗಿ ಉತ್ತರಿಸಿದ್ದು ನೆನಪಿದೆ: 'ದಾಂಪತ್ಯ ಬಂಧನ ಎನಿಸಿಕೊಳ್ಳುವವರಿಗೆ ಅದರಿಂದ ಹೊರಹೋಗಲು ಅವಕಾಶ ಕೊಟ್ಟಾಗ ಮಾತ್ರ ಸಂಬಂಧದ ವಿಶೇಷತೆ ಅರಿವಾಗುತ್ತದೆ.'

ನಿಮಗೇನಾದರೂ ಹೊಳೆಯುತ್ತಿದೆಯೇ? ಹಾಗಿದ್ದಲ್ಲಿ ನನ್ನೊಡನೆ ಹಂಚಿಕೊಳ್ಳಿ!

**ಸಂಪರ್ಕಕ್ಕೆ: 8494933888;**
**Email: vinod.chebbi@gmail.com**